# ಸಂಕಲನಾತ್ಮಕ ಮೌಲ್ಯಮಾಪನ – 02

## ವಿಷಯ : ಪ್ರಥಮ ಭಾಷೆ – ಕನ್ನಡ

## Subject : First Language - KANNADA

**ತರಗತಿ : 8ನೇ ತರಗತಿ** **[ ವಿಷಯ ಸಂಕೇತ : 01–K**

**ಸಮಯ : 1. ಗಂಟೆ 30 ನಿಮಿಷಗಳು** **[ ಗರಿಷ್ಠ ಅಂಕಗಳು : 50**

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **4 X 1 = 04**

1. 'ಹಳ್ಳವೊಂದು' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

   (ಎ) ಲೋಪಸಂಧಿ (ಬಿ) ಸವರ್ಣದೀರ್ಘ ಸಂಧಿ

   (ಸಿ) ಆದೇಶಸಂಧಿ (ಡಿ) ಆಗಮಸಂಧಿ

2. 'ಹಗಲುಗನಸು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

   (ಎ) ತತ್ಪುರುಷ ಸಮಾಸ (ಬಿ) ಕರ್ಮಧಾರಯ ಸಮಾಸ

   (ಸಿ) ಕ್ರಿಯಾ ಸಮಾಸ (ಡಿ) ಅಂಶಿ ಸಮಾಸ

3. 'ಕಾವೇರಿ ನದಿ' ಪದವು ಈ ನಾಮಪದಕ್ಕೆ ಉದಾಹರಣೆ.

   (ಎ) ಅಂಕಿತನಾಮ (ಬಿ) ಅನ್ವರ್ಥನಾಮ

   (ಸಿ) ರೂಢನಾಮ (ಡಿ) ಸರ್ವನಾಮ

4. ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಬಳಸುವ ಲೇಖನ ಚಿಹ್ನೆ

   (ಎ) ಅಲ್ಪವಿರಾಮ (ಬಿ) ಅರ್ಧ ವಿರಾಮ

   (ಸಿ) ಪೂರ್ಣ ವಿರಾಮ (ಡಿ) ಪ್ರಶ್ನಾರ್ಥಕ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **2 X 1 = 02**

5. ಕಾವ್ಯ : ಕಬ್ಬ :: ಆಶ್ಚರ್ಯ : ________

6. ಕ್, ಗ್ : ಅಲ್ಪಪ್ರಾಣಾಕ್ಷರಗಳು :: ಖ್, ಝ್ : ________

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 5 X 1 = 05**

7. ದೊರೆಯ ಚಿಕ್ಕಮಗಳು ಗೆಳತಿಯರೊಂದಿಗೆ ಎಲ್ಲಿಗೆ ಹೋದಳು?
8. ಕೋಗಿಲೆಯ ಕೂಗನ್ನು ಆಲಿಸಿದ ಮನುಷ್ಯ ಏನೆಂದು ಹೇಳಿದನು?
9. ದಾಶರಥಿ ಎಂದರೆ ಯಾರು?
10. ಕೋಟೆಗೋಡೆಗೆ ಮೆಟ್ಟಿಲುಗಳು ಯಾವುದು?

**IV. ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 4 X 2 = 08**

14. ದೊರೆಯ ಮಗ ದೇಶಾಂತರ ಹೋಗಲು ಕಾರಣವೇನು?
15. ಕೋಗಿಲೆಯ ಗಾನಕ್ಕೆ ಪ್ರಕೃತಿಯು ಹೇಗೆ ಸ್ಪಂದಿಸಿತು?
16. ಶ್ರೀರಾಮನು ಧಾನ್ಯಗಳ ವಿಚಾರದಲ್ಲಿ ಕೈಗೊಂಡ ತೀರ್ಮಾನವೇನು?
17. ಆಟೋ ಚಾಲಕರಲ್ಲಿಯೂ ಮಾನವೀಯತೆಯನ್ನರಿತ ಪ್ರಸಂಗದ ಬಗ್ಗೆ ತಿಳಿಸಿ.

**V. ಕೆಳಗಿನ ಕವಿ/ ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ/ ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 1 X 3 = 3**

18. ಯು.ಆರ್. ಅನಂತಮೂರ್ತಿ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣವಿಭಾಗ ಮಾಡಿ, ಛಂದಸ್ಸನ್ನು ಹೆಸರಿಸಿ ಲಕ್ಷಣ ಬರೆಯಿರಿ. 1 x 3 = 3**

19. ಅರಸುಗಳು ನಾವೆಲ್ಲ ಭೂಮೀ
ಸುರರುನೆರೆದಿಹ ದಾನವರು ವಾ
ನರರು ನಮಗೀ ನ್ಯಾಯವನು ಪರಿಹರಿಸಲಳವಲ್ಲ

**VII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 x 3 = 3**

20. "ದೇಶ ಸುತ್ತಿ ನೋಡು; ಕೋಶ ಓದಿನೋಡು."
ಅಥವಾ
ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

**VIII. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳನ್ನು ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ. 2 x 3 = 6**

21. "ಬರ್ರೋ ಗುಡಿ ಸಿಕ್ಕಿತು ಬರ್ರೋ ದೇವಾಲಯ ದೊರಕಿತು"
22. "ಬಾಳುವರು ಗಂಧದೊಲು ಜೀವ ತೆಯ್ದು!"

**IX. ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** 1 x 4 = 4

23. ಕಾಯಕದಲ್ಲಿ ನಿರತನಾಡೆ

____________________________________

____________________________________

____________________________________

____________________________________

ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು

**ಅಥವಾ**

ಕಾಗೆಯಮರಿ ಕೋಗಿಲೆಯಾಗಬಲ್ಲುದೆ ?

____________________________________

____________________________________

____________________________________

____________________________________

ಮುಖವ ನೋಡಲಾಗದು ಅಮುಗೇಶ್ವರಾ. ಮುನಿವೆಂ.

**X. ಈ ಕೆಳಗಿನ ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** 1 x 4= 4

24. ಶತ್ರುಘ್ನಾದ್ಯರನ್ನು ಅರಣ್ಯಕನು ಸತ್ಕರಿಸಿದ ವಿಚಾರದಲ್ಲಿ ಮುದ್ದಣ ಮನೋರಮೆಯರ ಮಧ್ಯೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಅಥವಾ**

ಮುದ್ದಣನಿಗೆ ಒಲಿದ ಮಂತ್ರವನ್ನು ತಿಳಿದುಕೊಳ್ಳುವ ವಿಚಾರದಲ್ಲಿ ಗಂಡ–ಹೆಂಡತಿಯರ ನಡುವೆ ನಡೆದ ಸಂಭಾಷಣೆಯನ್ನು ನೀವು ಮೆಚ್ಚುವಿರಾ? ಏಕೆ?

**XI. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** 1 x 4 = 4

25. ನಿಮ್ಮನ್ನು ಬೆಳಗಾವಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಗೀತಾ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡುವಂತೆ ಕೋರಿ, ಮಹಾನಗರ ಪಾಲಿಕೆಯ ಆಯುಕ್ತರಿಗೊಂದು ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಕೋಲಾರದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ 'ರಮೇಶ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಗಣರಾಜ್ಯೋತ್ಸವ' ಕಾರ್ಯಕ್ರಮದ ವಿವರಗಳನ್ನು ತಿಳಿಸಿ, ಬಳ್ಳಾರಿ ವಿದ್ಯಾನಗರ ಬಡಾವಣೆಯ ನಿವಾಸಿಯಾದ 'ಕಮಲಾಕರ' ಎಂಬ ಗೆಳೆಯನಿಗೆ ಪತ್ರವನ್ನು ಬರೆಯಿರಿ.

**XII. ಈ ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** 1 x 4=4

26. ರಾಷ್ಟ್ರೀಯ ಭಾವೈಕ್ಯ

**ಅಥವಾ**

ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ